**ಕರ್ನಾಟಕ ಸರ್ಕಾರ**

**(ವಾಣಿಜ್ಯ ತೆರಿಗೆ ಇಲಾಖೆ)**

ಸಂಖ್ಯೆ: ವಾತೆಜಂಆ(ಆ)/ವಿ.ಸ&ಸೇ.ತೆ.ಕ/ಟೆಂಡರ್/ 2024-25

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ)
ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ,
"ಸುಮೌಲ್ಯ ಸೌಧ" ಕ್ಲಬ್ ರಸ್ತೆ, ಬೆಳಗಾವಿ
ದೂ.ಸಂ; 0831-2407366
ದಿನಾಂಕ: 19-02-2025.

## : ಟೆಂಡರ್ ಅಧಿಸೂಚನೆ;

ಸನ್ 2025-26 ರ ಅವಧಿಗೆ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ ಬೆಳಗಾವಿ, ಹಾಗೂ ಅಧೀನ ಕಛೇರಿಗಳಿಗೆ ಸಾಮಾನ್ಯ ಟೆಂಡರ ಪ್ರಕ್ರಿಯೆ ಮುಖೇನ ಮಾಲೀಕರೆ ಚಾಲಕರಾಗಿರುವ **09** (ಒಂಬತ್ತು) ಖಾಸಗಿ ವಾಹನಗಳನ್ನು ಸರ್ಕಾರಿ ಆದೇಶ **ಸಿಆಸುಇ/96/ಶಿವಾನೀ/2012 ದಿ-23-08-2012** ರಲ್ಲಿ ನಿಗದಿಪಡಿಸಿರುವ ಷರತ್ತಿಗೊಳಪಟ್ಟು ಮತ್ತು ಮಾನ್ಯ ವಾಣಿಜ್ಯ ತೆರಿಗೆ ಆಯುಕ್ತರವರ ದರ ಪರಿಷ್ಕರಣೆಯ ಸುತ್ತೋಲೆ ಸಂಖ್ಯೆ ವಿಹೆಚ್‌ಟಿ/ಸಿಆರ್-22/2019-20, ದಿನಾಂಕ 27-04-2022 ರಲ್ಲಿ ನಿಗದಿಪಡಿಸಿರುವ ಬಾಡಿಗೆ ದರ ಹಾಗೂ ಷರತ್ತಿಗೊಳಪಟ್ಟು ಹವಾನಿಯಂತ್ರಿತವಲ್ಲದ ವಾಹನಕ್ಕೆ **2,500** ಕಿ.ಮೀ.ಗೆ ಗರಿಷ್ಟ ಮಾಸಿಕ ಮೊತ್ತ ರೂ. **35,000/-** ಹಾಗೂ ಹವಾನಿಯಂತ್ರಿತ ವಾಹನಕ್ಕೆ ರೂ. **40,000/-** ಮಾಸಿಕ ಬಾಡಿಗೆ ಆಧಾರದ ಮೇಲೆ ಪಡೆಯಲು ನಿಶ್ಚಯಿಸಲಾಗಿದೆ. **ಸನ್ 2018** ಮತ್ತು ನಂತರದ ವರ್ಷಗಳಲ್ಲಿ ತಯಾರಾದ ಮಾದರಿಯ ವಾಹನಗಳನ್ನು ಮಾತ್ರ ಪರಿಗಣಿಸಲಾಗುವುದು. ಈ ಕುರಿತು ದಿನಾಂಕ: **19-02-2025** ರಂದು ಇಲಾಖೆಯ ಸೂಚನಾ ಫಲಕದಲ್ಲಿ ಸಂಬಂಧಿಸಿದ ವಿವರವಾದ ಷರತ್ತುಗಳನ್ನು ಪ್ರಕಟಿಸಲಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **05-03-2025** ರ ಸಾಯಂಕಾಲ **05-00** ಗಂಟೆ. ಅರ್ಜಿಯನ್ನು ವಾಹನದ ಸಂಪೂರ್ಣ ದಾಖಲೆಗಳೊಂದಿಗೆ ಸೀಲ್ ಮಾಡಿದ ಲಕೋಟೆಯಲ್ಲಿ ಸಲ್ಲಿಸತಕ್ಕದ್ದು. ಹೆಚ್ಚಿನ ವಿವರಗಳಿಗಾಗಿ ಕಛೇರಿ ಸಮಯದೊಳಗೆ ವಾಹನ ಶಾಖೆಗೆ ಅಥವಾ ಸಹಾಯ ಪೀಠಕ್ಕೆ ದೂರವಾಣಿ: **<u>0831-2407366</u>** ಯಲ್ಲಿ ಸಂಪರ್ಕಿಸಬಹುದು.

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ)
ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಬೆಳಗಾವಿ.

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ),
ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ,
ಬೆಳಗಾವಿ ವಿಭಾಗ, ಬೆಳಗಾವಿ-590001.